■ ಹನಿ

## ನಿವೃತ್ತಿ ಎಂದು?

ನವೆಂಬರ್‌ನಲ್ಲಿ ಭಾರತಕ್ಕೆ ವೆಸ್ಟ್ ಇಂಡೀಸ್ ತಂಡ ಪ್ರವಾಸ ಬರಲಿದ್ದು ಎರಡು ಟೆಸ್ಟ್‌ಗಳನ್ನೂ ಆಡಲಿದೆ. ಸಚಿನ್ ತೆಂಡೂಲ್ಕರ್ ಈಗಾಗಲೆ 198 ಟೆಸ್ಟ್‌ಗಳನ್ನು ಆಡಿದ್ದು, ಆ ಎರಡು ಟೆಸ್ಟ್ ಮುಗಿಸಿದರೆ 200 ಟೆಸ್ಟ್‌ನ ಐತಿಹಾಸಿಕ ಮೈಲಿಗಲ್ಲು ತಲುಪುತ್ತಾರೆ. "ಆಗಲಾದರೂ ಟೆಸ್ಟ್‌ನಿಂದ ರಿಟೈರ್ ಆಗಿ" ಎಂದು ಬಿಸಿಸಿಐ ಸಚಿನ್‌ರಿಗೆ ಸಣ್ಣ ಸೂಚನೆ ನೀಡಿದೆಯಂತೆ. ಹಾಗೆಂದು ಸುದ್ದಿ ಪ್ರಕಟವಾದ ಬೆನ್ನಲ್ಲೇ ಕ್ರಿಕೆಟ್ ಅಭಿಮಾನಿಗಳು ಬಿಸಿಸಿಐ ಪದಾಧಿಕಾರಿಗಳ ವಿರುದ್ಧ ಮಾಧ್ಯಮಗಳಲ್ಲಿ ಹಿಗ್ಗಾಮುಗ್ಗಾ ಟೀಕೆ ಶುರು ಮಾಡಿದ್ದಾರೆ. ಈ ಟೀಕೆಗೆ ಬೆದರಿದ ಬಿಸಿಸಿಐ ಪದಾಧಿಕಾರಿಯೊಬ್ಬರು, "ಸುಮ್ಮನೆ ಹೀಗೆಲ್ಲ ಸುಳ್ಳು ಬರೆಯಬೇಡಿ. ನಾವು ಸಚಿನ್‌ರನ್ನು ನಿವೃತ್ತರಾಗಿ ಎಂದು ಕೇಳಿಯೇ ಇಲ್ಲ. ಅದೇನಿದ್ದರೂ ಅವರಿಗೆ ಬಿಟ್ಟ ವಿಷಯ. ಟೆಸ್ಟ್‌ಗೆ ಅವರನ್ನು ಆಯ್ಕೆ ಮಾಡುವುದೂ ಆಯ್ಕೆ ಸಮಿತಿಗೆ ಬಿಟ್ಟ ವಿಷಯ. ನಮಗೆ ಸಂಬಂಧವಿಲ್ಲ" ಎಂದಿದ್ದಾರೆ.

16ರ ಹರೆಯದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟಾತ ಸಚಿನ್. ಅವತ್ತಿನಿಂದಲೂ ಈತ ಕ್ರಿಕೆಟ್ ಮೈದಾನಕ್ಕೆ ಇಳಿದಾಗಲೆಲ್ಲ ಒತ್ತಡದಲ್ಲೇ ಆಟವಾಡಿದ್ದು. ಅದರಲ್ಲೂ ಕಳೆದ ಐದು ವರ್ಷಗಳಿಂದ ಕೆಲವರು 'ನಿವೃತ್ತಿ ಎಂದು?' ಎಂಬ ಪ್ರಶ್ನೆ ಕೇಳುತ್ತಲೇ ಇದ್ದಾರೆ. ಸಚಿನ್ ಬ್ಯಾಟಿನ ಮೂಲಕ ಉತ್ತರಿಸುತ್ತಲೇ ಇದ್ದಾರೆ. ಒಂದು ಅಂದಾಜಿನ ಪ್ರಕಾರ, 2014ರಲ್ಲಿ ಸಚಿನ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟು 25 ವರ್ಷವಾಗುತ್ತದೆ. ಆಗ ನ್ಯೂಜಿಲೆಂಡ್ ಪ್ರವಾಸ ಕೂಡಾ ಇರುತ್ತದೆ. ಆ ಸಂದರ್ಭದಲ್ಲೇ ಸಚಿನ್ ನಿವೃತ್ತಿ ಘೋಷಿಸಬಹುದು. ಹಾಗಾಗಬಹುದೆ? ಸಚಿನ್‌ರನ್ನೇ ಕೇಳಬೇಕು! ■



## ಬೆದರದ ಸೋನು



'ಬಾಲಿವುಡ್‌ನಲ್ಲಿ ಕಿಶೋರ್ ಕುಮಾರ್ ಬಳಿಕ ಬಂದ ಅತ್ಯುತ್ತಮ ಗಾಯಕ ಸೋನು ನಿಗಮ್' ಎಂಬ ಮಾತಿದೆ. ರಫಿ ಸಾಹೇಬ್ ಮತ್ತು ಮುಖೇಶ್ ಅಭಿಮಾನಿಗಳು ಇದನ್ನು ಒಪ್ಪುವುದಿಲ್ಲವಾದರೂ, ಬಹುತೇಕ ಸಂಗೀತ ನಿರ್ದೇಶಕರು ಹೇಳುವ ಮಾತಿದು. 40 ದಾಟ ಮಾಗಿರುವ ಸೋನು, ಇತ್ತೀಚೆಗೆ ಸಿನಿಮಾಗಳಿಗೆ ಹಾಡುವುದನ್ನೇ ನಿಲ್ಲಿಸಿದಂತಿದೆ. 1997ರಲ್ಲಿ ಈತ ಹಾಡಿದ 'ಸಂದೇಸೇ ಆತೇ ಹೈ' ಎನ್ನುವ ಹಾಡು ಇವತ್ತಿಗೂ ಸಿನಿಪ್ರಿಯರ ರಾಷ್ಟ್ರಗೀತೆಯಂತೆಯೇ ಬೇಡಿಕೆಯಲ್ಲಿ ಉಳಿದುಕೊಂಡಿದೆ. ಕನ್ನಡದಲ್ಲೂ ಈತ 'ಮುಂಗಾರು ಮಳೆ'ಗೆ 'ಅನಿಸುತಿದೆ ಯಾಕೋ ಇಂದು' ಹಾಡಿ ಹಲವು ವರ್ಷಗಳೇ ಉರುಳಿದರೂ ಈಗಲೂ ಅದು ಪ್ರೇಮಿಗಳ ಅಚ್ಚುಮೆಚ್ಚಿನ ಹಾಡಾಗಿದೆ. ತೀರಾ ಇತ್ತೀಚೆಗೆ ಬಾಲಿವುಡ್ ಚಿತ್ರಗಳಿಗೆ ಈತ ಹಾಡಿದ್ದು ಎಂದರೆ ಕಳೆದ ವರ್ಷ ಬಿಡುಗಡೆಯಾದ 'ಅಗ್ನಿಪಥ್'ಗೆ. 'ಅಭಿ ಮುಜ್ ಮೆ ಕಹೀಂ' ಎಂಬ ಆ ಹಾಡು ಕೂಡಾ 'ಟಾಪ್ ಚಾರ್ಟ್'ನಲ್ಲಿದೆ. 'ಸಿನಿಮಾಕ್ಕೆ ಹಾಡದೆ ಇನ್ನೇನು ಮಾಡುತ್ತಿದ್ದಾನೆ?' ಎಂದು ಯಾರಾದರೂ ಪ್ರಶ್ನಿಸಿದರೆ, ಉತ್ತರಿಸಲೂ ಸೋನುಗೆ ಪುರುಸೊತ್ತಿಲ್ಲ. ಆತ ಲೈವ್ ಕಾರ್ಯಕ್ರಮ ಮತ್ತು ವಿಶ್ವ ಪ್ರವಾಸದಲ್ಲಿ ಅತ್ಯಂತ ಬ್ಯುಸಿ! ಸಿನಿಮಾದಲ್ಲಿ ಹಾಡಿದರೆ ಒಂದು ಹಾಡಿಗೆ ಸುಮಾರು 15 ಲಕ್ಷ ರೂಪಾಯಿ ಪಡೆಯುವ ಸೋನು, ವಿಶ್ವ ಪ್ರವಾಸದಲ್ಲಿ ನೀಡುವ ಲೈವ್ ಕಾರ್ಯಕ್ರಮಗಳಿಗೆ ಒಂದು ವರ್ಷ ಮುಂಚೆಯೇ ಯೋಜನೆ ಸಿದ್ಧವಾಗಿರುತ್ತದೆ.

ಹಾಗಿದ್ದೂ ಬಾಲಿವುಡ್‌ನಲ್ಲಿ ಸೋನು ಸುದ್ದಿಯಲ್ಲಿದ್ದಾನೆ. 'ನಮಗೆ ತಿಂಗಳಿಗಿಷ್ಟು ಹಣ ಕೊಡು' ಎಂದು ಆತನಿಗೆ ಭೂಗತ ರೌಡಿ ಚೋಟಾ ಶಕೀಲ್ ನಿಂದ ಬೆದರಿಕೆ ಕರೆಗಳು ಬಂದಿದೆಯಂತೆ. ಬೆದರಿಕೆಗೆ ಬಗ್ಗದ ಸೋನು ಪೊಲೀಸರಿಗೆ ದೂರು ಕೊಟ್ಟಿದ್ದಾನೆ. ಮಾಧ್ಯಮಗಳಿಗೂ ಪ್ರತಿಕ್ರಿಯೆ ನೀಡಿದ್ದಾನೆ. 'ಸುಮಾರು 16 ವರ್ಷಗಳ ಹಿಂದೆ ಹೀಗೆಯೇ ನನಗೆ ಚೋಟಾ ಶಕೀಲ್ ಕಡೆಯಿಂದ ಬೆದರಿಕೆ ಕರೆ ಬಂದಿತ್ತು. ಆಗ ನನಗಿನ್ನೂ 24. ನನ್ನಲ್ಲಿ ಹಣವೇ ಇರಲಿಲ್ಲ. ಏನು ಮಾಡಬೇಕೆಂದೂ ಗೊತ್ತಿರಲಿಲ್ಲ. ನನ್ನ ಕುಟುಂಬದ ಗೆಳೆಯರೊಬ್ಬರು ಚೋಟಾ ಶಕೀಲ್‌ನನ್ನು ಸಂಪರ್ಕಿಸಿ ಮಾತನಾಡಿದ ಬಳಿಕ ಬೆದರಿಕೆ ಕರೆ ನಿಂತಿತ್ತು. ಈಗ ನಾನು ಹಣಕ್ಕಾಗಿ ಹಾಡುತ್ತಿಲ್ಲ. ಸಾರ್ವಜನಿಕ ಜೀವನದಲ್ಲಿ ದೊಡ್ಡ ಗೌರವದ ಸ್ಥಾನವನ್ನೂ ಪಡೆದಿದ್ದೇನೆ. ಹೀಗೆ ಬೆದರಿಕೆ ಕರೆ ಮಾಡುತ್ತಿದ್ದರೆ ಕಲಾವಿದನೊಬ್ಬ ತನ್ನ ಅತ್ಯುತ್ತಮವಾದುದನ್ನು ಹೇಗೆ ಕೊಡಲು ಸಾಧ್ಯ?' ಎನ್ನುವುದು ಸೋನು ಪ್ರಶ್ನೆ. ಸದ್ಯಕ್ಕೆ ಸೋನು ಸುತ್ತ ಪೊಲೀಸರ ಭದ್ರತೆ ಹೆಚ್ಚಾಗಿದೆ. ಆದರೆ ಕಲಾವಿದನೊಬ್ಬನ ಸೃಜನಶೀಲತೆಗೆ ಧಕ್ಕೆ ಉಂಟು ಮಾಡುವ ಇಂತಹ ಪರಿಸ್ಥಿತಿಯನ್ನು ತಡೆಯುವುದು ಹೇಗೆ ಎಂಬ ಆತನ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ. ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65